**14** ದಿನಗಳು ಕಳೆದವು. ವಿಸೋಬ ಖೇಚರನಿಂದ ದೀಕ್ಷೆ ಪಡೆದ ನಾಮದೇವ ಪಂಡರಾಪುರಕ್ಕೆ ಮರಳಿದ. ಒಂದುದಿನ ಭಕ್ತರು ಒಂದು ಸಂತರ್ಪಣೆಯನ್ನು ಏರ್ಪಡಿಸಿದ್ದರು. ಊಟದ ವೇಳೆ ಅಲ್ಲಿಗೆ ಒಂದು ನಾಯಿ ಬಂದು ನಾಮದೇವನ ಎಲೆಯಿಂದ ರೊಟ್ಟಿಯನ್ನು ಎತ್ತಿಕೊಂಡು ಓಡಿಹೋಯಿತು.

**15**




**16** ನಾಮದೇವ ತುಪ್ಪದ ಪಾತ್ರೆಯೊಂದಿಗೆ ಆ ನಾಯಿಯ ಹಿಂದೆ ಓಡಿದ.




**17** ಕೂಡಲೇ ವಿಠಲನೇ ನಾಮದೇವನ ಮುಂದೆ ಕಾಣಿಸಿಕೊಂಡ.




ದೇವರಿಗೆ ಸಂಬಂಧಪಟ್ಟ ರಹಸ್ಯವನ್ನು ತಿಳಿಯಬೇಕೆಂದು ನೀನು ಅತಿ ಕಾತರನಾಗಿದ್ದರೆ, ಅವನು ನಿನಗೆ ಸದ್ಗುರುವನ್ನು ಕಳುಹಿಸುತ್ತಾನೆ. ಗುರುವನ್ನು ಹುಡುಕುವುದಕ್ಕೆ ನೀನು ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ.

– ಶ್ರೀ ರಾಮಕೃಷ್ಣ






# ಲಿಂಬ್ಡಿ ರಾಮಕೃಷ್ಣ ಮಿಷನ್ನಿನಲ್ಲಿ ರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ ಉದ್ಘಾಟನಾ ಸಮಾರಂಭ

ಭಗವಾನ್ ಶ್ರೀರಾಮಕೃಷ್ಣರ ವಿಶ್ವಭಾವೈಕ್ಯ ಮಂದಿರದ ಉದ್ಘಾಟನೆಯು ಗುಜರಾತಿನ ಲಿಂಬ್ಡಿಯಲ್ಲಿರುವ ರಾಮಕೃಷ್ಣ ಮಿಷನ್ನಿನಲ್ಲಿ ೨೦೧೪ರ ನವೆಂಬರ್ ೧ ರಂದು ನೆರವೇರಿತು. ಜಗದ್ಧಾತ್ರೀ ಪೂಜೆಯ ಈ ಶುಭದಿನದಂದು ನೂತನ ಮಂದಿರದ ಉದ್ಘಾಟನೆಯನ್ನು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಉಪಾಧ್ಯಕ್ಷರಲ್ಲಿ ಒಬ್ಬರಾದ ಶ್ರೀಮತ್ ಸ್ವಾಮಿ ವಾಗೀಶಾನಂದಜಿ ಮಹಾರಾಜ್ ಅವರು ನೆರವೇರಿಸಿದರು.

ಮೂರು ದಿನಗಳ ಕಾರ್ಯಕ್ರಮಗಳಲ್ಲಿ ಸುಮಾರು ೨೦೦ ಮಂದಿ ಸಂನ್ಯಾಸಿ-ಬ್ರಹ್ಮಚಾರಿಗಳು, ಭಾರತದ ಎಲ್ಲೆಡೆಗಳಿಂದ ಬಂದ ಸುಮಾರು ೧೧,೦೦೦ ಮಂದಿ ಭಕ್ತರು ಪಾಲ್ಗೊಂಡರು. ಅಕ್ಟೋಬರ್ ೩೧ ರಿಂದ ನವೆಂಬರ್ ೨ ರ ವರೆಗೆ ನಡೆದ ಈ ಕಾರ್ಯಕ್ರಮಗಳಲ್ಲಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಭಾಕಾರ್ಯಕ್ರಮಗಳು ಜರಗಿದವು.

ಅಕ್ಟೋಬರ್ ೩೧ ರಂದು ಭಜನೆ, ದಂಡಿಯಾ ನೃತ್ಯ, ಶಿವ ನೃತ್ಯ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದವು. ನವೆಂಬರ್ ೧ ರಂದು ಮಂದಿರದ ಉದ್ಘಾಟನೆಯ ಪ್ರಧಾನ ಕಾರ್ಯಕ್ರಮ ನಡೆಯಿತು. ದಿವ್ಯತ್ರಯರ ಚಿತ್ರಗಳೊಂದಿಗೆ ಅನೇಕ ಮಂದಿ ಸಾಧು, ಬ್ರಹ್ಮಚಾರಿಗಳು ಹಾಗೂ ಭಕ್ತ ವೃಂದ ದೇವಾಲಯಕ್ಕೆ ಪ್ರದಕ್ಷಿಣೆ ಮಾಡುತ್ತ ಉತ್ಸವದ ವಾತಾವರಣ ಸೃಷ್ಟಿಯಾಯಿತು. ಸುಂದರವಾದ ಪಲ್ಲಕ್ಕಿಯಲ್ಲಿ ದಿವ್ಯತ್ರಯರ ಚಿತ್ರವನ್ನು ಹೊತ್ತು ನಗರದುದ್ದಕ್ಕೂ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ಹಲವು ಮಂದಿ ಜಾನಪದ ನೃತ್ಯ , ಸಂಗೀತ ಕಲಾವಿದರು; ಭಜನ-ಕೀರ್ತನೆಯ ಕಲಾವಿದರು ಭಾಗವಹಿಸಿದ್ದರು.

ವಿವಿಧ ಸಂಪ್ರದಾಯಗಳಿಗೆ ಸೇರಿದ ಹಲವು ಮಂದಿ ಧಾರ್ಮಿಕ ಮುಖಂಡರು ಸ್ಫೂರ್ತಿದಾಯಕವಾದ ಪ್ರವಚನಗಳನ್ನು ನೀಡಿದರು. ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ವಾಗೀಶಾನಂದಜಿ ಮಹಾರಾಜ್ ಅವರು ಸಭಾಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.



